ಕರಾಸಕೈಅನಿನಿ
**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
**(ಕರ್ನಾಟಕ ಸರ್ಕಾರದ ಒಂದು ಉದ್ಯಮ)**
**ನೊಂದಾಯಿತ ಕಛೇರಿ:** ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–560010
**ದೂರವಾಣಿ:**080-23407011-25 ಇ–ಮೈಲ್:kssidcho@karnataka.gov.in ವೆಬ್‌ಸೈಟ್:www.kssidc.co.in

---

ಸಂಖ್ಯೆ:ಸಮನ್ವಯ:ಮಳಿಗೆ:ನಿವೇಶನ:ಹಂಚಿಕೆ:ಪಾವತಿ:ಕಾಲಾವಧಿ:2024 ದಿನಾಂಕ 13-09-2024

## ಕಛೇರಿ ಆದೇಶ

ವಿಷಯ: ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆ ಮಾಡಿ ಒಂದು ವರ್ಷ ಅವಧಿ ಮೇಲಾಗಿರುವ ಮಳಿಗೆ/ನಿವೇಶನಗಳ ಹಂಚಿಕೆದಾರರಿಂದ ಮೌಲ್ಯವನ್ನು ಪಾವತಿಸಿಕೊಳ್ಳಲು ಕಾಲಾವಕಾಶ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ 25.07.2024 ರಂದು ಜರುಗಿದ ನಿಗಮದ 373 ನೇ ಮಂಡಳಿ ಸಭೆ ನಡವಳಿ.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ದಿನಾಂಕ 14.01.2016 ರಂದು ಜರುಗಿದ ನಿಗಮದ 337ನೇ ಮಂಡಳಿ ಸಭೆಯ ನಿರ್ಣಯದನ್ವಯ ನಿಗಮದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ 'ಸಿ' ಮತ್ತು 'ಡಿ' ಪ್ರವರ್ಗದಲ್ಲಿ ಬರುವ ಉದ್ದಿಮೆದಾರರುಗಳಿಗೆ ಹಣ ಪಾವತಿಸಲು 365 ದಿನಗಳಿಗಿಂತಲೂ ಹೆಚ್ಚಿನ ಕಾಲಾವಕಾಶವನ್ನು ನೀಡಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿದ್ದರಿಂದ ಅದರಂತೆ ದಿನಾಂಕ 22.02.2016ರಂದು ಕಛೇರಿ ಆದೇಶ ಹೊರಡಿಸಲಾಗಿತ್ತು.

ಆದರೆ, 'ಎ' ಮತ್ತು 'ಬಿ' ಪ್ರವರ್ಗದಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳಲ್ಲಿನ ಮಳಿಗೆ/ನಿವೇಶನಗಳ ಹಂಚಿಕೆದಾರರು ಸಹ ಮೌಲ್ಯ ಪಾವತಿಸಲು ಹಣಕಾಸಿನ ತೊಂದರೆ/ಬ್ಯಾಂಕಿನಿಂದ ಅನುಮತಿ ಪಡೆಯುವುದು, ಯೋಜನೆ ಅನುಷ್ಠಾನಗೊಳಿಸಲು ವಿಳಂಭ ಇತ್ಯಾದಿ ಕಾರಣಗಳಿಂದ ಮಳಿಗೆ/ನಿವೇಶನಗಳ ಮೌಲ್ಯ ವನ್ನು ನಿಗದಿತ ಸಮಯದಲ್ಲಿ ಪಾವತಿಸಲು ಸಾಧ್ಯವಾಗಿರುವುದಿಲ್ಲವೆಂದು, ಒಂದು ವರ್ಷ ಅವಧಿಗೂ ಹೆಚ್ಚಿನ ಕಾಲಾಕಾಶವನ್ನು ನೀಡಲು ಕೋರಿರುತ್ತಾರೆ.

ಅದರಂತೆ, ಕಾರ್ಯಸೂಚಿಯನ್ನು ದಿನಾಂಕ 25.07.2024 ರಂದು ಜರುಗಿದ ನಿಗಮದ 373 ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಮಂಡಳಿಯು ಈ ಕೆಳಗಿನಂತೆ ತೀರ್ಮಾನಿಸಿರುತ್ತದೆ.

**"ಮಂಡಳಿ ಸಭೆಯು ಸುದೀರ್ಘವಾಗಿ ಚರ್ಚಿಸಿ, ಪ್ರಸ್ತುತ ಇರುವ ವ್ಯವಸ್ಥಾಪಕ ನಿರ್ದೇಶಕರವರಿಗೆ ಒಂದು ವರ್ಷದ ಕಾಲಾವಧಿಯನ್ನು ಮುಂದುವರೆಸುವ ಅಧಿಕಾರವಿದ್ದು, ಅದರಂತೆಯೇ ಮುಂದುವರೆಸಲು ಸೂಚಿಸಿತು ಮತ್ತು ಒಂದು ವರ್ಷಕ್ಕಿಂತ ಹೆಚ್ಚು ಕಾಲಾವಧಿ ಕೋರುವ ಮನವಿಗಳನ್ನು ಮಂಡಳಿ ಸಭೆಗೆ ಮಂಡಿಸುವಂತೆ ಸೂಚಿಸಿತು"**

ಈ ತರಹದ ಯಾವುದಾದರೂ ಪ್ರಕರಣಗಳು ಇದ್ದಲ್ಲಿ, ಸಕಾರಣಗಳೊಂದಿಗೆ ಪ್ರಸ್ತಾವನೆ ತಯಾರಿಸಿ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ. ಒಂದು ವೇಳೆ ಸಮಯಾವಕಾಶ ನೀಡಿದಲ್ಲಿ ನಿಯಮಾನುಸಾರ ಪಾವತಿಸಬೇಕಾದ ಬಾಕಿ ಮೊತ್ತವನ್ನು ಸಂದರ್ಭಾನುಸಾರ ಬಾಕಿ ಮೊತ್ತವನ್ನು ಬಡ್ಡಿಯೊಂದಿಗೆ ಅಥವಾ ಪ್ರಚಲಿತ ದರದ ವ್ಯತ್ಯಾಸದ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸುವುದಾಗಿ ಅವರಿಂದ ರೂ.100 ಛಾಪಾ ಕಾಗದದಲ್ಲಿ ಒಪ್ಪಿಗೆ ಪ್ರಮಾಣ ಪತ್ರ ಪಡೆದು ಸಲ್ಲಿಸಲು ಸಹ ತಿಳಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ತುಮಕೂರು/ಹುಬ್ಬಳ್ಳಿ/ ಬೆಳಗಾವಿ/ ಕಲಬುರಗಿ/ಮೈಸೂರು/ಶಿವಮೊಗ್ಗ
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ದಾವಣಗೆರೆ / ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ)/(ಆಡಳಿತ&ಭೂಸ್ವಾಧೀನ)/(ಹಣಕಾಸು), ಕರಾಸಕೈಅನಿನಿ, ಬೆಂಗಳೂರು.
2. ಉಪ ಪ್ರಧಾನ ವ್ಯವಸ್ಥಾಪಕರು(ಕೈವ)ವ-1&2/(ಆ.ಲೆ.ಪ)/(ವಾಣಿಜ್ಯ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು.
3. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು)/(ಸಿಬ್ಬಂದಿ), ಕರಾಸಕೈಅನಿನಿ, ಬೆಂಗಳೂರು
4. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರವರ ಆಪ್ತ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ವ್ಯವಸ್ಥಾಪಕರು(ಗಣಕಯಂತ್ರ), ಕರಾಸಕೈಅನಿನಿ, ಬೆಂಗಳೂರು ಇವರ ಮಾಹಿತಿಗಾಗಿ ಮತ್ತು ಸದರಿ ತಿದ್ದುಪಡಿ ಕಛೇರಿ ಆದೇಶವನ್ನು ನಿಗಮದ ವೆಬ್ ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದೆ.

# ಮುಚ್ಚಳಿಕೆ ಪತ್ರ

(ರೂ.100/-ರ ಛಾಪಾ ಕಾಗದದಲ್ಲಿ)

ದಿನಾಂಕ____________ ರಂದು ಈ ಕೆಳಗೆ ಸಹಿ ಮಾಡಿರುವ ನಾನು ಮುಚ್ಚಳಿಕೆ ಪತ್ರದ ಪ್ರಕಾರ ಬರೆದುಕೊಡುವುದೇನೆಂದರೆ, ____________ ಕೈಗಾರಿಕಾ ವಸಾಹತುವಿನಲ್ಲಿ ನನಗೆ ನಿವೇಶನ ಸಂಖ್ಯೆ ____________ ಹಂಚಿಕೆಯಾಗಿದ್ದು, ಸದರಿ ನಿವೇಶನದ ಬಾಕಿ ಮೊತ್ತ ಪಾವತಿಸಲು ಒಂದು ವರ್ಷಕ್ಕೂ ಮೀರಿಗಿಲಾಗಿ ಕಾಲಾವಕಾಶ ನೀಡಲು ಕೋರಿದ್ದು, ಅದರಂತೆ ಕಾಲಾವಕಾಶ ನೀಡಿದಲ್ಲಿ, ನಾನು ನಿಗಮಕ್ಕೆ ಪಾವತಿಸಬೇಕಾದ ಬಾಕಿ ಮೊತ್ತ ರೂ.________ಗಳನ್ನು ಶೇಕಡ 12.5% ಬಡ್ಡಿಯಂತೆ ಕಾಲಾವಕಾಶ ನೀಡುವ ಅವಧಿಯವರೆಗೂ ಪಾವತಿಸುವುದಾಗಿ ಅಥವಾ ಕಾಲಾವಕಾಶ ನೀಡುವ ಅವಧಿಯಲ್ಲಿ ಒಂದು ವೇಳೆ ನಿವೇಶನಗಳ ದರಗಳು ಪರಿಷ್ಕರಣೆಗೊಂಡಲ್ಲಿ ಪರಿಷ್ಕೃತ ದರದಂತೆ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ಬದ್ದರಾಗಿರುತ್ತೇವೆ. ಒಂದು ವೇಳೆ ಕಾಲಾವಕಾಶ ನೀಡಿದ ಅವಧಿಯವರೆಗೂ ಹಣ ಪಾವತಿಸಲು ವಿಫಲನಾದಲ್ಲಿ, ಸದರಿ ನಿವೇಶನಕ್ಕೆ ಪಾವತಿಸಿರುವ Earnest Money Deposit (EMD) ಮೊತ್ತ ಹಾಗೂ ನಿವೇಶನಕ್ಕೆ ಪಾವತಿಸಿರುವ ಭಾಗಶ: ಮೊತ್ತಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಹಾಗೂ ಹಂಚಿಕೆಯಾದ ನಿವೇಶನವನ್ನು ರದ್ದುಪಡಿಸಿದಲ್ಲಿ ನನ್ನಿಂದ ಯಾವುದೇ ತಕರಾರು/ಅಭ್ಯಂತರ ವ್ಯಕ್ತಪಡಿಸುವುದಿಲ್ಲವೆಂದು ಒಪ್ಪಿ ಸಹಿ ಮಾಡಿರುತ್ತೇವೆ.

ಸ್ಥಳ:_____________ ಹಂಚಿಕೆದಾರರ ಸಹಿ.